ಹೋಟೇಲಿಗೆ ಬರತಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಕಡ್ಡಾಯವಾಗಿ ಫಿಲ್ಟರ್ ವಾಟರ್ ಕೊಡಬೇಕೆಂಬ ನಿಯಮವನ್ನು ಅಳವಡಿಸಿ ಲೈಸೆನ್ಸ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವರ್ತನೆ ಬೇಜವಾಬ್ದಾರಿತನದ್ದೆಂದು ಸರ್ಕಾರ ಈಗಾಗಲೇ ಮನಗಂಡಿದೆ. ಈಗಾಗಲೇ ಕ್ರಮ ತೆಗೆದುಕೊಂಡಿರುವುದರ ಜೊತೆಗೆ ಈ ಬೇಜವಾಬ್ದಾರಿತನಕ್ಕೆ ಇನ್ಯಾರಾದರೂ ಅಧಿಕಾರವರ್ಗದವರು ಕಾರಣರಾಗಿದ್ದರೆ, ಅವರ ಮೇಲೂ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಗೆ ಈಗಾಗಲೇ ಸೂಚನೆ ಕೊಡಲಾಗಿದೆ. ಮತ್ತು ಪ್ರಜಾಪ್ರತಿನಿಧಿಗಳನ್ನು ಕಂಡು ಉದಾಸೀನ ಭಾವದಿಂದ ಅವರ ಸಲಹೆಗಳನ್ನು ತಿರಸ್ಕಾರ ಮಾಡುವುದು ಕೂಡ ಆಕ್ಷಮ್ಯವಾದುದು. ಇದು ಸರ್ಕಾರದ ಡಿಕ್ಲೇರ್ಡ್ ಪಾಲಿಸಿಗೂ ವಿರುದ್ಧವಾಗಿದೆ.

ಶ್ರೀ ಎಂ. ಮಹದೇವ್:– ಯಾರೇ ಉನ್ನತಾಧಿಕಾರಿಗಳಾಗಿರಲಿ ಪ್ರಜಾಪ್ರತಿನಿಧಿಗಳ ಭಾವನೆಗಳನ್ನು ತಿರಸ್ಕರಿಸುವುದಾಗಲಿ, ಅಗೌರವದಿಂದ ಕಾಣುವುದಾಗಲಿ ಇದ್ದರೆ ಸರ್ಕಾರ ಅಂತಹವರ ಮೇಲೆ ತೀವ್ರತರವಾದ ಕ್ರಮ ಕೈಗೊಳ್ಳಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ತಾವು ಹೇಳಿದ್ದಕ್ಕೆ ನಾನು ಒಪ್ಪಿಗೆ ಕೊಟ್ಟಿದ್ದೇನೆ. ನಂತರ, ಮಾನ್ಯ ಸದಸ್ಯರಾದ ಶ್ರೀ ಸಿಂಧ್ಯರವರು, ಡಾ: ಮಲಕರೆಡ್ಡಿಯವರು ರಚನಾತ್ಮಕವಾದ ಸಲಹೆ ಕೊಟ್ಟಿದ್ದು, ಅದು ಬಹಳ ಯೋಗ್ಯವಾದುದಾಗಿದೆ. ಈಗಾಗಲೇ ಮುಖ್ಯಮಂತ್ರಿಗಳು he has given a blank cheque to the Department on this matter. ಎಷ್ಟು ಬೇಕಾದರೂ ಹಣವನ್ನು ಖರ್ಚು ಮಾಡಿ, ಈ ರೋಗ ಹರಡದಂತೆ ತಡೆಯುವುದಷ್ಟೇ ಅಲ್ಲ, ಮುಂದೆ ಬಾರದಂತೆ ತಡೆಗಟ್ಟುವುದಕ್ಕೆ ಇಡೀ ರಾಜ್ಯದಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಸರ್ಕಾರದಿಂದ ಆದೇಶವನ್ನು ಇಲಾಖೆಯವರಿಗೆ ಕೊಟ್ಟಿದ್ದಾರೆ. ಆದರಂತೆ ಯಾವ ಕಡೆಗಳಲ್ಲಿ ಔಷಧಿಗಾಗಲಿ ಅಥವಾ ತಕ್ಷಣದ ಸೇವೆಗಾಗಲಿ ಯಾವುದಕ್ಕೂ ತೊಂದರೆ ಬಾರದಂತೆ ಏರ್ಪಾಡು ಮಾಡುವುದಕ್ಕೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. The work is going on a war-like preparations. ಆದುದರಿಂದ, ಮಾನ್ಯ ಸದಸ್ಯರ ಕಳಕಳಿ ಏನಿದೆ, ಇದು ಸರ್ಕಾರಕ್ಕೆ ಪೂರ್ಣವಾಗಿ ಅರ್ಥವಾಗಿದೆ. ಇದಿಷ್ಟು ಮಾಡಿರುವ ಕ್ರಮವಲ್ಲದೆ ಮತ್ತೇನಾದರೂ ಕ್ರಮಗಳನ್ನು ತೆಗೆದುಕೊಳ್ಳಲು ತಾವು ಸಲಹೆ ಕೊಟ್ಟರೂ ಕೂಡ ಇಲಾಖೆಯವರು ಅದನ್ನು ಪರಿಗಣಿಸಿ ಮುಂದಿನ ಕೆಲಸ ಮಾಡುವುದಕ್ಕೆ ಸೂಚನೆ ಕೊಡಲಾಗಿದೆ. ಮಾನ್ಯ ಸದಸ್ಯರುಗಳು ಒಂದು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಬಿಡುಗಡೆ ಮಾಡಬೇಕೆಂದು ಕೇಳಿದ್ದಾರೆ, ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ಬಿಡುಗಡೆ ಮಾಡಲು ಸರ್ಕಾರ ತಯಾರಿದೆ. ಯಾವುದೇ ಕಾರಣದಿಂದ ಈ ರೋಗ ಉಲ್ಬಣಗೊಳ್ಳದ ರೀತಿಯಲ್ಲಿ ತಡೆಗಟ್ಟಲು ಎಲ್ಲಾ ಪ್ರಯತ್ನ ಮಾಡಲಾಗಿದೆ.

ಅಧ್ಯಕ್ಷರು:– ಈಗ ಪ್ರಕಟಣೆ, ಮಾನ್ಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳ ಪ್ರಯಾಣ ದರ ಏರಿಕೆ ಬಗ್ಗೆ ಪರಿಶೀಲನಾ ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ. ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು 7 ಗಂಟೆ 10 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 16ನೇ ಮಾರ್ಚ್ 1993ರ ಮಂಗಳವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(† ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲ ಎಂದು ಸೂಚಿಸುತ್ತದೆ).